# ವಾರ್ತಾ ವಿಶ್ಲೇಷಣೆ

## ಭಾರತದ ಋಣಭಾರ

"ಋಣಂ ಕೃತ್ವಾ ಘೃತಂ ಪಿಬೇತ್" ಎಂಬ ಚಾರ್ವಾಕರ ಹಿತನುಡಿಯನ್ನು ಅನೇಕ ವ್ಯಕ್ತಿಗಳು ಮಾತ್ರವಲ್ಲದೆ ದೇಶಗಳೂ ಪಾಲಿಸುತ್ತಿವೆ. ಒಬ್ಬ ವ್ಯಕ್ತಿಯು ಸಾಲ ಮಾಡಿದರೆ ಅದರ ಹೊರೆಯನ್ನು ಅವನೇ ಹೊರುತ್ತಾನೆ. ಆದರೆ ದೇಶವು ಸಾಲ ಮಾಡಿದರೆ ಅದರ ಭಾರವನ್ನು ಪ್ರಜೆಗಳು ಹೊರಬೇಕು. ಆದರೆ ತುಪ್ಪವನ್ನು ತಿನ್ನುವವರು ಮಾತ್ರ ಅಧಿಕಾರಸ್ಥರು!

ಜಗತ್ತಿನ ಅನೇಕ ರಾಷ್ಟ್ರಗಳು ಋಣಭಾರದಿಂದ ನರಳುತ್ತಿವೆ—ವಿಶೇಷವಾಗಿ ಲ್ಯಾಟಿನ್-ಅಮೆರಿಕನ್ ರಾಷ್ಟ್ರಗಳು. ಅಲ್ಲಿಯ ಜನರ ಖರ್ಚು ಜಾಸ್ತಿ, ಉತ್ಪತ್ತಿ ಕಡಮೆ. ಜನರಿಗೆ ಎಲ್ಲ ಆಧುನಿಕ ಸೌಲಭ್ಯಗಳೂ ಬೇಕು. ಇವನ್ನು ಶ್ರೀಮಂತ ದೇಶಗಳಿಂದ ಆಮದು ಮಾಡಿಕೊಳ್ಳಬೇಕು.

ಆದರೆ ಇತ್ತೀಚೆಗೆ ಭಾರತದ ಸಾಲದ ಪರಿಸ್ಥಿತಿ ಉತ್ತಮವಾಗುತ್ತಿದೆ ಎಂದು "ದಿ ಹಿಂದೂ" (ಫೆಬ್ರುವರಿ ೨೫, ೨೦೦೨) ಪತ್ರಿಕೆ ವರದಿ ಮಾಡುತ್ತದೆ. ಪ್ರಥಮ ಬಾರಿಗೆ ವಿಶ್ವ ಬ್ಯಾಂಕ್ ಭಾರತವನ್ನು ಕಡಮೆ ಋಣಭಾರವಿರುವ ದೇಶಗಳ ವರ್ಗಕ್ಕೆ ಸೇರಿಸಿದೆಯಂತೆ. ವಿದೇಶ ಸಾಲ ಮತ್ತು GDPಗಳ ಪ್ರಮಾಣ (ratio) ವರ್ಷ ವರ್ಷಕ್ಕೂ ಕಡಮೆಯಾಗುತ್ತಿರುವುದೆಂದು ವರದಿ ತಿಳಿಸುತ್ತದೆ. ೧೯೯೨ರಲ್ಲಿ ಇದು ೩೮.೭೧ ಶತಾಂಶ ಇದ್ದದ್ದು ೨೦೦೧, ಸೆಪ್ಟೆಂಬರ್‌ನಲ್ಲಿ ೨೧ ಶತಾಂಶಕ್ಕೆ ಇಳಿದಿದೆಯಂತೆ.

ಇದಕ್ಕೆ ಮುಖ್ಯ ಕಾರಣ ರಫ್ತು ಜಾಸ್ತಿಯಾಗಿರುವುದು ಮತ್ತು ಸಾಲವನ್ನು ವ್ಯವಸ್ಥಿತ ರೀತಿಯಲ್ಲಿ ನಿಭಾಯಿಸುತ್ತಿರುವುದು. ಭಾರತದ ಆರ್ಥಿಕ ಸ್ಥಿತಿಯೂ ಹೆಚ್ಚು ಸ್ಥಿರವಾಗಿರುವುದೆಂದು ಅನೇಕ ಆರ್ಥಿಕ ಚಿಂತಕರು ಅಭಿಪ್ರಾಯಪಡುತ್ತಾರೆ. ಇದಕ್ಕೆ ಮುಖ್ಯ ಕಾರಣ, ಇಲ್ಲಿ ಬಡತನವೇ ಸ್ಥಿರವಾಗಿರುವುದು ಮತ್ತು ಬಡವರ ಸಂಖ್ಯೆಯೇ ಅಧಿಕವಾಗಿರುವುದು! ಇಲ್ಲಿಯ ಜನರು ಕಡಮೆ ಖರ್ಚಿನಲ್ಲಿ ಬಾಳಬಲ್ಲರು. ಅವರಿಗೆ ಮನೆಯೇ ಬೇಕಿಲ್ಲ, ಏನಾದರೂ ತಿಂದು ಬದುಕುತ್ತಾರೆ. "ಕರತಲಭಿಕ್ಷಃ, ತರುತಲವಾಸಃ" ಎಂಬಂತೆ ಸಂನ್ಯಾಸಿಯ ಸ್ವಯಂಪ್ರೇರಿತ ಬಡತನ ಬಹುಸಂಖ್ಯಾಕರ ಮೇಲೆ ಒತ್ತಾಯಪೂರ್ವಕವಾಗಿ ಹೇರಲ್ಪಟ್ಟಿದೆ—ಭಾರತದ ಭ್ರಷ್ಟರಾಜಕೀಯ ವ್ಯವಸ್ಥೆಯಿಂದಾಗಿ.

ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ತೀವ್ರ ಹೃದಯವೇದನೆಯಿಂದ ಆಡಿದ ಮಾತುಗಳು ನೆನಪಿಗೆ ಬರುತ್ತದೆ: "ಇಂಥ ಅವನತಿಯ ಸ್ಥಿತಿಯಲ್ಲಿ, ಇಂಥ ಕಡುಬಡತನದಲ್ಲಿ ಭಾರತ ಬದುಕಿರುವುದಾದರೂ ಏತಕ್ಕೆ? ಪ್ರತಿಕ್ಷಣವೂ ನರಕಯಾತನೆ ಈ ಭಾರತ ಮಾತೆಗೆ. ಊಟಕ್ಕಿಲ್ಲ, ಬಟ್ಟೆಗಿಲ್ಲ, ಅವಮಾನ, ಅವನತಿ ಇದೇ ಆಕೆಯ ಪಾಲಿಗೆ. ಹೇಗೋ ಉಸಿರಾಡುತ್ತಿದ್ದಾಳೆ. ಅದೊಂದೇ ಬದುಕಿನ ಚಿಹ್ನೆ." ಪ್ರಪಂಚದ ರಾಷ್ಟ್ರಗಳ ಒಕ್ಕೂಟದಲ್ಲಿ ಭಾರತಕ್ಕೆ ಮಾತ್ರವೇ ಸಾಧ್ಯವಾಗಿರುವ ಅಧ್ಯಾತ್ಮದ ಕೊಡುಗೆಯೊಂದಿದೆ. ಅದೊಂದಕ್ಕಾಗಿಯೇ ಭಾರತ ಬದುಕಿರುವಂತಿದೆ. ❖

## ಶ್ರೀಮಂತಿಕೆಯ ಸ್ಪರ್ಧೆ

ಇದು ವಿಶ್ವದಾಖಲೆಯ ಯುಗ. ಬೇರೆ ಬೇರೆ ಕ್ಷೇತ್ರಗಳಲ್ಲಿ ಜನರು ವಿಶ್ವದಾಖಲೆಯನ್ನು ಸಾಧಿಸಲು, ವಿಶ್ವದಾಖಲೆಯನ್ನು ಮುರಿಯಲು ಹವಣಿಕೆ ಸರ್ವವ್ಯಾಪಕವಾಗಿದೆ. ಈ ಹುಚ್ಚು "ವಿಶ್ವಸುಂದರಿ" "ವಿಶ್ವಚಾಂಪಿಯನ್" ಎಂದೆಲ್ಲ ಬಿರುದು ಪಡೆಯುವ ಮೋಜು ಜನಸಾಮಾನ್ಯರಲ್ಲಿ ಕಂಡುಬರುವಂತೆ "ವಿಶ್ವಶ್ರೀಮಂತ" ಎಂಬ ಬಿರುದು ಪಡೆಯಲು ಕೂಡ ಜನ ತವಕಿಸುತ್ತಿರುವರು.

"ನಾವು ತಿನ್ನುವ ಪ್ರತಿಯೊಂದು ತುತ್ತೂ ಇನ್ನೊಬ್ಬರ ಬಾಯಿಂದ ಕಿತ್ತು ತಂದುದು" (ಕೃತಿಶ್ರೇಣಿ, ಸಂ.೧, ಪು. ೮೭) ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. "ಶ್ರೀಮಂತಿಕೆಯು ಬಡವನ ರಕ್ತದಿಂದ ಸಿಕ್ತವಾಗಿದೆ" ಎನ್ನುತ್ತಾನೆ ಟಾಲ್‌ಸ್ಟಾಯ್. ಇದು ನಿಜವೆಂದು ಕಂಡು ಬರುತ್ತದೆ. ಒಂದು ಕಡೆ ಶ್ರೀಮಂತರು ಹೆಚ್ಚು ಹೆಚ್ಚು ಶ್ರೀಮಂತರಾಗುತ್ತಿರುವಂತೆ ಬಡವರು ಇನ್ನೂ ಬಡವರಾಗುತ್ತಿದ್ದಾರೆ—ಶ್ರೀಮಂತ ಬಡವರ ಅಂತರ ದಿನದಿನಕ್ಕೂ ಅಧಿಕವಾಗುತ್ತಿರುವುದೆಂದು *The Washington Post* ವರದಿ ಮಾಡುತ್ತದೆ. ಚೀನಾದ ಅತಿ ದೊಡ್ಡ ಶ್ರೀಮಂತನ ಆಸ್ತಿ ೧ ಬಿಲಿಯನ್ ಡಾಲರ್ ಆದರೆ ಅದೇ ದೇಶದ ಬಡವನಿಗೆ ದಿನಕ್ಕೆ ಒಂದು ಡಾಲರ್ ಕೂಡ ಸಿಕ್ಕುವುದು ಕಷ್ಟ. ಈ ಶ್ರೀಮಂತ-ಬಡವರ ಅಂತರ ಜಗತ್ತಿನ ಆರ್ಥಿಕ ಚಿಂತಕರನ್ನು ಕಳವಳಕ್ಕೆ ಈಡುಮಾಡಿದೆ. ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಹೆಚ್ಚು ಹೆಚ್ಚು ಸಮಾನತೆಯನ್ನು ಕಾಣುವ ಬದಲು ವಿಷಮತೆಯನ್ನೇ ಕಾಣುತ್ತಿದ್ದೇವೆ.

ಅಮೆರಿಕದ *Forbes* ಪತ್ರಿಕೆಯ ಇತ್ತೀಚಿನ ವರದಿಯ ಪ್ರಕಾರ ಬಿಲ್ ಗೇಟ್ಸ್ ಈಗಲೂ ಕೂಡ ವಿಶ್ವದ ಅತಿ ದೊಡ್ಡ ಶ್ರೀಮಂತನಂತೆ—ಭೂಗ್ರಹದಲ್ಲೇ ಅತಿ ದೊಡ್ಡ ಶ್ರೀಮಂತನಂತೆ ! ಆತನ ಆಸ್ತಿಯ ಮೊತ್ತ ೫೨.೮ ಬಿಲಿಯನ್ ಡಾಲರ್ಸ್ ! ಪ್ರಪಂಚದಲ್ಲಿ ಒಟ್ಟು ೪೯೭ ಬಿಲಿಯನೇರ್ಸ್ ಇದ್ದಾರೆಂದೂ ಅವರೆಲ್ಲರ ಆಸ್ತಿಯ ಮೊತ್ತ ೧.೫೪ ಟ್ರಿಲಿಯನ್ ಡಾಲರ್ಸ್ ಎಂದೂ ಪತ್ರಿಕೆ ವರದಿ ಮಾಡುತ್ತದೆ. ಇವರಲ್ಲಿ ೨೪೩ ಜನ ಅಮೆರಿಕನ್ನರು. ವಿಶ್ವದಲ್ಲಿನ ಅರ್ಧಕ್ಕಿಂತ ಹೆಚ್ಚು ಆಸ್ತಿ ಅಮೆರಿಕದಲ್ಲೇ ಇರುವಂತೆ ತೋರುವುದು!

"ಈ ಪ್ರಪಂಚಕ್ಕೆ ನೀವು ಕೊಡಬೇಕಾದುದು ಏನುಂಟೊ ಅದನ್ನು ಅವಶ್ಯವಾಗಿಯೂ ಕೊಡಿರಿ" (ಅದೇ, ಪು. ೧೯) ಎಂದು ಸ್ವಾಮಿ ವಿವೇಕಾನಂದರು ಅಮೆರಿಕದಲ್ಲಿ ಕೊಟ್ಟ ಕರೆಯನ್ನು ಅವರು ಪಾಲಿಸುತ್ತಿರುವ ರೀತಿಯೇ ಬೇರೆ ! ಅಥವಾ "ಈ ಪ್ರಪಂಚದ ಸುಖವನ್ನು ನಾವು ಹೆಚ್ಚಿಸಲಾಗುವುದಿಲ್ಲ. ಹಾಗೆಯೇ ದುಃಖವನ್ನೂ ಹೆಚ್ಚಿಸಲಾಗುವುದಿಲ್ಲ. ಸುಖದುಃಖಗಳನ್ನು ಉಂಟುಮಾಡುವ ಶಕ್ತಿಗಳ ಮೊತ್ತ ಈ ಭೂಮಿಯಲ್ಲಿ ಉದ್ದಕ್ಕೂ ಏಕಪ್ರಕಾರವಾಗಿದೆ. ಅದನ್ನು ಆ ಕಡೆಯಿಂದ ಈ ಕಡೆಗೂ ಈ ಕಡೆಯಿಂದ ಆ ಕಡೆಗೂ ತಳ್ಳಬಹುದು. ಆದರೆ ಅದರ ಪರಿಣಾಮ ಮಾತ್ರ ಒಂದೇ ಆಗಿರುವುದು" (ಕೃತಿಶ್ರೇಣಿ, ಸಂ.೧, ಪು.೧೧೭) ಎಂಬ ಸ್ವಾಮಿ ವಿವೇಕಾನಂದರ ವಾಣಿಯನ್ನು ಅವರು ಸಮರ್ಥಿಸುತ್ತಿರಬಹುದು. ❖